ಕತ್ತೆಯ ಕನಸು



ಶರತ್ ಶೆಟ್ಟಿ ಪಡುಪಳ್ಳಿ

ಒಂದಾನೊಂದು ಕಾಲದಲ್ಲಿ, ಒಬ್ಬ ದೊಡ್ಡ ವ್ಯಾಪಾರಿಯ ಹತ್ತಿರ ಬಹಳ ನಿಷ್ಠಾವಂತ ಕತ್ತೆಯೊಂದಿತ್ತು. ಆತ ಅದಕ್ಕೆ ಹೊಟ್ಟೆತುಂಬಾ ಬೂಸ, ಗಂಜಿ, ಹುಲ್ಲು ಎಲ್ಲವನ್ನೂ ನೀಡಿ ಬಹಳ ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದನು. ಹಾಗೆಯೇ ಆ ಕತ್ತೆಗೂ ಯಜಮಾನನ ಮೇಲೆ ಅಪಾರ ಗೌರವವಿತ್ತು. ಹೀಗಿರಲಾಗಿ, ಒಮ್ಮೆ ಈ ಊರಿನ ಕತ್ತೆ ಮೇಯುತ್ತಾ ಮೇಯುತ್ತಾ ಕಾಡಿನ ದಾರಿಗೆ ಹೋಯಿತು. ಅದನ್ನು ಕಂಡ ಕಾಡ ಕತ್ತೆಯೊಂದು ಹೀಗೆ ಕೇಳಿತು:

"ನಮಸ್ಕಾರ ಮಾರಾಯ, ಅದೇನು ನಿನ್ನ ಕೊರಳಲ್ಲಿ ಹಗ್ಗ?" ಎಂದು ಕೇಳಿತು. ಅದಕ್ಕೆ ಊರಿನ ಕತ್ತೆ ಹೇಳಿತು, "ನಾನು ಇಲ್ಲಿನ ದೊಡ್ಡ ಸಾಹುಕಾರರ ಕತ್ತೆ. ಅವರು ಪ್ರೀತಿಯಿಂದ ನನ್ನ ಕೊರಳಿಗೆ ಇಷ್ಟು ಚಂದದ ಹಗ್ಗವನ್ನು ಕಟ್ಟಿದ್ದಾರೆ ಗೊತ್ತಾ ."

ಆಗ ಕಾಡು ಕತ್ತೆ ಹೇಳಿತು, "ಓ ಹುಚ್ಚನೇ, ನನ್ನನ್ನು ನೋಡು ಎಷ್ಟು ಬಿಂದಾಸ್ ಆಗಿದ್ದೇನೆ. ಯಾರ ಹಂಗೂ ಇಲ್ಲದೆ ಎಲ್ಲಿ ಬೇಕಾದರೂ ಹೋಗಿ ಮೇಯುತ್ತಿದ್ದೇನೆ. ನೀನೇನು ಮಾರಾಯ, ಆ ಮನುಷ್ಯರು ಹೇಳಿದ ಹಾಗೆ ಕೇಳಿಕೊಂಡು, ಬೆನ್ನು ನೋವು ಬರುವಷ್ಟು ಭಾರ ಹೊತ್ತುಕೊಂಡು ಅಲ್ಲೇ ಇದ್ದೀಯಲ್ಲ? ಆತ ನಿನಗೆ ಹೊಟ್ಟೆ ತುಂಬಾ ಸರಿಯಾಗಿ ತಿನ್ನಲು ಕೊಡುತ್ತಾನೆಯೇ? ಚೆನ್ನಾಗಿ ನೋಡಿಕೊಳ್ಳುತ್ತಾನೆಯೇ?" ಎಂದು ಕೇಳಿತು.

ಅದಕ್ಕೆ ಊರಿನ ಕತ್ತೆ ಹೇಳಿತು, "ನನ್ನ ಹತ್ತಿರ ಭಾರ ಹೊರಿಸುತ್ತಾನೆ, ಒಮ್ಮೊಮ್ಮೆ ಬೆನ್ನಿಗೆ ಪೆಟ್ಟನ್ನೂ ಹಾಕುತ್ತಾನೆ. ಆದರೆ, ಹೊಟ್ಟೆಗಂತೂ ಕಡಿಮೆ ಮಾಡುವುದಿಲ್ಲ, ಆತ ಒಳ್ಳೆಯವನು."

ಆಗ ಕಾಡು ಕತ್ತೆ ಹೇಳಿತು, "ಓ ಮರುಳನೇ, ನೀನು ಇನ್ನು ಕೂಡ ಅವನ ಹತ್ತಿರವೇ ಇರಬೇಡ, ನನ್ನ ಜೊತೆಬಾ. ನೀನು ನನ್ನ ಜಾತಿಯವನೇ ಅಲ್ಲವೇ? ಹಾಗಾಗಿಕರೆಯುತ್ತಿದ್ದೇನೆ ನನ್ನ ಜೊತೆ ಬಾ ಮಾರಾಯ, ಎಲ್ಲಿ ಬೇಕೋ ಅಲ್ಲಿಗೆ ಹೋಗಿ ಯಾರದ್ದೇ ತೋಟಕ್ಕೂ ನುಗ್ಗಬಹುದು. ಯಾವ ಕೊರಳ ಹಗ್ಗವೂ ನಿನ್ನನ್ನು ತಡೆಯುವುದಿಲ್ಲ" ಎಂದು ಒತ್ತಾಯ ಮಾಡಿತು.

ಆಗ ಊರಿನ ಕತ್ತೆಗೂ ಕಾಡು ಕತ್ತೆಯ ಮಾತು ಸರಿ ಎನ್ನಿಸಿತು. ಸ್ವಲ್ಪ ಹೊತ್ತು ಯೋಚಿಸಿ ಹೀಗೆ ಹೇಳಿತು: "ನಿನ್ನ ಮಾತು ಸರಿ ಎಂದು ನನಗೂ ಅನ್ನಿಸುತ್ತಿದೆ. ಆದರೆ ನಾನು ಒಂದು ನಿರೀಕ್ಷೆಯಲ್ಲಿದ್ದೇನೆ ಅದಕ್ಕಾಗಿ ಕಾಯುತ್ತಿದ್ದೇನೆ ಮಾರಾಯ. ಒಂದು ವೇಳೆ ನಾನು ನಿನ್ನ ಜೊತೆ ಬಂದರೆ ಆ ಆಸೆ ನಿರೀಕ್ಷೆ ... ಅದು ಹಾಗೆಯೇ ಉಳಿದುಬಿಡುತ್ತದೆ."ಅದಕ್ಕೆ ಕಾಡು ಕತ್ತೆ ಕೇಳಿತು, "ಅಂತಹ ಆಸೆ ನಿರೀಕ್ಷೆ ಏನಪ್ಪ ಅದು? ಹೇಳು ನಾನೂ ಕೇಳುತ್ತೇನೆ."

ಅದಕ್ಕೆ ಊರಿನ ಕತ್ತೆ ಹೇಳಿತು, "ವಿಷಯ ಏನೆಂದರೆ, ನನ್ನ ಯಜಮಾನನಿಗೆ ಒಬ್ಬಳು ಸುಂದರವಾದ ಮಗಳಿದ್ದಾಳೆ. ಆತ ಒಮ್ಮೊಮ್ಮೆ ಅವಳ ಮೇಲೆ ಕೋಪಿಸಿ ಬೈಯುತ್ತಾನೆ. ಹಾಗೇ ಬೈಯುತ್ತಾ ಹೇಳುತ್ತಾನೆ: 'ನೋಡು, ನೀನು ನಾನು ಹೇಳಿದ ಹಾಗೆ ಕೇಳದಿದ್ದರೆ, ನಿನ್ನನ್ನು ನನ್ನ ಕತ್ತೆಗೆ ಕೊಟ್ಟು ಮದುವೆ ಮಾಡುತ್ತೇನೆ ನೋಡು!' ಎಂದು. ಅದನ್ನು ಕೇಳಿದಾಗ ನನಗೆ ಬಹಳ ಖುಷಿಯಾಗುತ್ತದೆ. ಹಾಗಾಗಿ ನಾನೇನಾದರೂ ನಿನ್ನ ಜೊತೆ ಕಾಡಿಗೆ ಬಂದರೆ, ಆತ ಅದೇ ಹೊತ್ತಿಗೆ ಮದುವೆಯ ತಯಾರಿ ನಡೆಸಿದರೆ?ಆಗ ನಾನು ಅಲ್ಲಿ ಇರಬೇಕಲ್ಲವೇ? ಅದನ್ನೇ ಯೋಚನೆ ಮಾಡುತ್ತಿದ್ದೇನೆ."

ಇದನ್ನು ಕೇಳಿದ ಕಾಡು ಕತ್ತೆ ನಗುತ್ತಾ, "ಅಯ್ಯೋ ಹುಚ್ಚನೇ, ಇದೂ ನಿನ್ನದೊಂದು ಕನಸೇ..." ಎಂದು ಅಲ್ಲಿಂದ ಓಡಿಹೋಯಿತು.

ಕಥೆಯ ನೀತಿ :

"ನಮ್ಮ ಜೀವನದಲ್ಲಿ ಎಷ್ಟೇ ಕಷ್ಟಗಳಿದ್ದರೂ ,ಸಹಿಸುತ್ತಾ ಅದೇ ಪರಮ ಸುಖಎಂದು ಬಗೆದು, ನಡೆಯದ ಅಥವಾ ಕೈಗೂಡದ ಅತಿ ಆಸೆಯ ನಿರೀಕ್ಷೆಯಲ್ಲಿಯೇ ನಮ್ಮ ಅಮೂಲ್ಯವಾದ ಬದುಕನ್ನು ವ್ಯರ್ಥ ಮಾಡಬಾರದು."

(ಅದೇ ರೀತಿ ಕೈಗೆಟುಕದ ಕನಸಿನ ನಿರೀಕ್ಷೆಯಲ್ಲಿ ಬರುವ ಸುಖವನ್ನು ಕಳೆದುಕೊಳ್ಳಬಾರದು ಎನ್ನುವುದೇ ಈ ಕಥೆಯ ಸಾರಾಂಶ).